**ಹನುಮಂತನ ಜನನ –** ಕೇಸರಿ ಮತ್ತು ಅಂಜನಾ ಎಂಬ ಕಪಿಗಳಲ್ಲಿ ವಾಯುದೇವರ ಅವತಾರ.

**ಬಾಲಾಂಜನೇಯನ ಸಾಹಸ –** ಜನಿಸಿದ ಕೆಲವೇ ದಿನಗಳಲ್ಲಿ ಬಲಿಷ್ಟವಾದ ಆ ಶಿಶುವು ಹಸಿದಿದ್ದನ್ನು ಕಂಡು ಹಣ್ಣು ತರಲೆಂದು ಅಂಜನೆ ಕಾಡಿಗೆ ಹೋಗಿದ್ದಾಗ, ಉದಿಸುತ್ತಿದ್ದ ಸೂರ್ಯನನ್ನು ಹಿಡಿಯಲೆಂದು ಧಾವಿಸುತ್ತಿದ್ದ ಮತ್ತು ಸೂರ್ಯನ ಕಾಂತಿಯಿಂದಾಗಿ ಕೆಂಪಾಗಿ ಕಾಣುತ್ತಿದ್ದ ರಾಹುವನ್ನು ಎದುರಿಸಿ ಹನುಮಂತ ಧಾವಿಸಿದ. ಆಗ ರಾಹು ಇಂದ್ರನನ್ನು ಶರಣಾಗಲು, ಇಂದ್ರ ಶಿಶುರೂಪದ ಹನುಮಂತನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದ. ಆಗ ಹನುಮಂತ ಬೆಟ್ಟದ ಶಿಖರದ ಮೇಲೆ ಬಿದ್ದ. ಆಗ ವಾಯುದೇವ ತನ್ನ ಆ ಶಿಶುವನ್ನು ಕೈಯಲ್ಲಿ ಹಿಡಿದುಕೊಂಡ, ಇಂದ್ರನ ಮೇಲೆ ಕೋಪಗೊಂಡ. ಆಗ ಇಡೀ ಪ್ರಪಂಚವೇ ಶಿವ, ಇಂದ್ರಾದಿ ದೇವತೆಗಳೆಲ್ಲಾ ನಿಶ್ಚೇಷ್ಟಿತರಾದರು. ಯಜ್ಞ, ಅಧ್ಯಯನ, ಧರ್ಮ, ಶ್ವಾಸೋಚ್ಛಾಸಗಳೆಲ್ಲ ನಿಂತುಹೋಯಿತು. ನಂತರ ಬ್ರಹ್ಮದೇವರು ಇತರ ದೇವತೆಗಳೊಂದಿಗೆ ಬಂದು ಆ ಮಗುವನ್ನು ಸ್ಪರ್ಶಮಾಡುತ್ತಿದ್ದಂತೆ ಅದು ಎಚ್ಚರ ಬಂದಂತೆ ವರ್ತಿಸಿದ.

ಹನುಮಂತ ಸೂರ್ಯನ ಹತ್ತಿರ ವ್ಯಾಕರಣವನ್ನು ಅಧ್ಯಯನ ಮಾಡಿದ.

**ಹನುಮಂತನ ಸಮುದ್ರತರಣ ನಿಶ್ಚಯ –**

ಹನುಮಂತ ದೇವರು ಕರೆದ ಕಪಿಸಮ್ಮೇಳನದಲ್ಲಿ ಸಕಲ ಕಪಿಗಳೂ ಭಾಗವಹಿಸಿ ತಮ್ಮ ತಮ್ಮ ಶಕ್ತಿ ಸಾಮರ್ಥ್ಯವನ್ನು ವಿವರಿಸಿದರು. ಕೆಲವರು ಹತ್ತು, ಇಪ್ಪತ್ತು, ಮೂವತ್ತು ಯೋಜನ ಹಾರಲು ಶಕ್ತರೆಂದು ಹೇಳಿದರೆ, ನೀಲ (ಅಗ್ನಿ), ಮೈಂದ-ವಿವಿದ (ಅಶ್ವಿನಿದೇವತೆಗಳು), ತಾರ (ಬೃಹಸ್ಪತಿ), ಸುಷೇಣ (ವರುಣ) ಮುಂತಾದವರು ಎಂಭತ್ತು ಯೋಜನ ಹಾರಲು ಶಕ್ತರೆಂದು ಹೇಳಿದರು. ಜಾಂಬವಂತ ತೊಂಂಭತ್ತು, ಅಂಗದ ೧೦೦ ಯೋಜನ ಊರ ಹಾರಬಲ್ಲೆ ಆದರೆ ಮತ್ತೆ ಮುಂದೆ ಏನೆಂದು ಗೊತ್ತಿಲ್ಲವೆಂದು ಹೇಳಿದಾಗಲೂ ಕೂಡ ಹನುಮಂತ ದೇವರು ಸುಮ್ಮನಿದ್ದರು. ಆಗ ಜಾಂಬವಂತನು "ಇಲ್ಲಿ ಸಮುದ್ರತರಣವಷ್ಟೇ ಮುಖ್ಯವಲ್ಲ, ಪುನ: ಇಷ್ಟು ದೂರಕ್ಕೆ ಹಾರಿ ಹಿಂದಕ್ಕೆ ಬರಬೇಕು. ದುರ್ಗಮವಾದ ಲಂಕಾವನ್ನು ಪ್ರವೇಶಿಸಿ ಸೀತೆಯನ್ನು ಹುಡುಕಿ, ರಾವಣನ ಸೈನ್ಯದೊಂದಿಗೆ ಹೋರಾಡಬೇಕಾಗುತ್ತದೆ. ಇಷ್ಟೆಲ್ಲಾ ಸಾಮರ್ಥ್ಯವನ್ನು ಹೊಂದಿರುವವರು ಹನುಮಂತನೊಬ್ಬನೇ, ಬೇರಾರೂ ಅಲ್ಲ" ಎಂದನು.

ಜಾಂಬವಂತ ಈ ಹಂತದಲ್ಲಿ ನುಡಿದ ಮಾತು ಹನುಮಂತನ ಹಿರಿಮೆಯನ್ನು ಸಾರುವ ರೀತಿ ಅನ್ಯಾದೃಶವಾದುದು. ಜಾಂಬವಂತ ನುಡಿದಿದ್ದು ಹನುಮಂತನ ಬಯಕೆಯೇ ಆಗಿತ್ತು.

**ಇಲ್ಲಿ ಕೆಲವು ವಿಷಯಗಳು** –

೧. ಎಲ್ಲಿ ಹನುಮಂತ ಇತರ ಕಪಿಗಳಿಗಿಂತ ಮುಂಚಿತವಾಗಿ ತನ್ನ ಸಾಮರ್ಥ್ಯವನ್ನು ಏತಕ್ಕೆ ಹೇಳಲಿಲ್ಲ?
೨. ಲಂಕೆಗೆ ಹಾರಲಿಲ್ಲ?
೩. ಅವನಿಗೆ ಶಾಪವಿದ್ದುದರಿಂದ ಅವನು ಸುಮ್ಮನಿದ್ದನೆ?
೪. ಜಾಂಬವಂತ ಹನುಮಂತನ ಶಕ್ತಿಸಾಮರ್ಥ್ಯವನ್ನು ವಿವರಿಸಿದ ಮೇಲಷ್ಟೆ ಅವನಿಗೆ ತನ್ನ ಶಕ್ತಿಯ ಅರಿವಾಯಿತೆ?

ಇಲ್ಲಿ ಹನುಮಂತನಿಗೆ ಕೆಲವು ಮುನಿಗಳು ಶಾಪವನ್ನು ಕೊಟ್ಟದ್ದು ನಿಜ. ಆದರೆ ಅವರ ಶಾಪದಿಂದ ಹನುಮಂತನಿಗೆ ಏನೂ ಆಗುವುದಿಲ್ಲ. ಆ ಮುನಿಗಳ ಅಧಿಕ ಪುಣ್ಯ ನಾಶವಾಗಲು ಕಾರಣವಾಯಿತಷ್ಟೇ. ಹನುಮಂತನ ಹಿರಿಮೆಯನ್ನು ಅರಿಯದ ಕೆಲವು ಮುನಿಗಳು ಆತನಿಗೆ ಶಾಪಕೊಟ್ಟದ್ದು ಅವರ ಅಜ್ಞಾನಕ್ಕೆ ದ್ಯೋತಕವೇ ಹೊರತು, ಅದರಿಂದೇನೂ ಹನುಮಂತನ ಹಿರಿಮೆ ಕುಂದಲಿಲ್ಲ. ಪ್ರಳಯಕಾಲದಲ್ಲೂ ಕುಂದದ ಅಪ್ರತಿಮಜ್ಞಾನ ಅವನದು.

ಸುಗ್ರೀವ ಶ್ರೀರಾಮಕಾರ್ಯವನ್ನು ಮರೆತಾಗ ಎಚ್ಚರಿಸುದ್ದು ಹನುಮಂತ. ಜಾಂಬವಂತಾದಿಗಳು ಮಯನ ಬಿಲದಲ್ಲಿ ಕುಳಿತು ಶ್ರೀರಾಮಕಾರ್ಯ ಕೈಬಿಡುವ ಹವಣಿಕೆಯಲ್ಲಿದ್ದಾಗ, ಅವರನ್ನೆಲ್ಲ ಎಚ್ಚರಿಸಿದ್ದು ಹನುಮಂತ. ಆಗ ಅವನನ್ನು ಹಾಗೆ ಮಾಡಲು ಎಚ್ಚರಿಸಿದ್ದು ಯಾರು?

ಅಕಸ್ಮಾತ್ ಹನುಮಂತ ದೇವರು ಮುಂಚೆಯೇ ತಾವೇ ಹೊರಟು ಲಂಕೆಗೆ ತೆರಳಿ ಸೀತಾನ್ವೇಷಣ ಕಾರ್ಯವನ್ನು ಪೂರೈಸಿ ಬಂದಿದ್ದರೆ, ಉಳಿದ ಕಪಿಗಳು ತಾವೂ ಅದನ್ನು ಮಾಡುತ್ತಿದ್ದೆವು ಎನ್ನಬಹುದಿತ್ತು. ಅದಕ್ಕೆ ಅವರ ಅಸಾಮರ್ಥ್ಯ ಅವರ ಮಾತಿನಿಂದಲೇ ಪ್ರಕಟವಾಗುವಂತಾಯಿತು.

## ಸುಂದರಕಾಂಡ –

ವಾಲ್ಮೀಕಿರಾಮಾಯಣದಲ್ಲಿ ಸುಂದರಕಾಂಡದಲ್ಲಿ ಒಟ್ಟು 68 ಅಧ್ಯಾಯಗಳು ಇವೆ. ಶ್ರೀಮದಾಚಾರ್ಯರು ಕೇವಲ ಐವತ್ತು ಶ್ಲೋಕಗಳ ಮಹಾಭಾರತ ತಾತ್ಪರ್ಯ ನಿರ್ಣಯದ ೭ನೇ

ಅಧ್ಯಾಯದಲ್ಲಿ ವಿವರಿಸಿದ್ದಾರೆ. ಸುಂದರಕಾಂಡವು ಹನುಮಂತನ ಸಾಹಸಗಳ ವರ್ಣನೆಯಾದರೆ, ಇಲ್ಲಿ ಬರುವ ಪ್ರತಿಯೊಂದು ಪ್ರಮೇಯವೂ ಸುಂದರ.

**ಸುಂದರೇ ಸುಂದರೀ ಲಂಕಾ, ಸುಂದರೇ ಸುಂದರೀ ಕಥಾ**

**ಸುಂದರೇ ಸುಂದರೀ ಸೀತಾ, ಸುಂದರೇ ಕಿಂ ನ ಸುಂದರಮ್?**

**ಸುಂದರೇ ಸುಂದರೋ ರಾಮ: ಸುಂದರೇ ಸುಂದರಂ ವನಂ ।**

**ಸುಂದರೇ ಸುಂದರೀ ಕಾವ್ಯಂ ಸುಂದರೇ ಸುಂದರ: ಕಪಿ: ।**

**ಸುಂದರೇ ಸುಂದರಂ ಮಂತ್ರಂ, ಸುಂದರೇ ಕಿಂ ನ ಸುಂದರಮ್ ?**

**ಸುಂದರಕಾಂಡದಲ್ಲಿ ವರ್ಣಿತವಾಗಿರುವ ಲಂಕಾ, ಸೀತಾಮಾತೆ, ರಾಮಚಂದ್ರದೇವರು, ಅಶೋಕವನ, ಮಧುವನ, ಹನೂಮಾನ್, ಇಲ್ಲಿರುವ ಮಂತ್ರಗಳು ಎಲ್ಲವೂ ಸುಂದರವೇ. ಇಡೀ ಕಥೇಯೇ ಸುಂದರವಾಗಿ ನಿರೂಪಿತವಾಗಿದೆ.**

ಹನುಮಂತದೇವರು ಮಹೇಂದ್ರಪರ್ವತವನ್ನು ತುಳಿದು ಮೇಲೆ ಹಾರಿದಾಗ ಆ ಒತ್ತಡಕ್ಕೆ ಅದರ ಬಹುಭಾಗ ಭೂಮಿಯಲ್ಲಿ ಹೂತಿತು. ಹಲವಾರು ಮರಗಿಡಗಳು ಬುಡಸಮೇತ ಕಿತ್ತು ಸಾಗರದಲ್ಲಿ ಬಿದ್ದವು. ಹನುಮಂತನ ವೇಗದಿಂದ ಸಾಗರ ಅಲ್ಲೋಲಕಲ್ಲೋಲವಾಯಿತು. ಹಿಂದೆ ಮೈನಾಕಪರ್ವತವನ್ನು ವಾಯುದೇವ ರಕ್ಷಿಸಿದ್ದ ನೆನಪಿಗಾಗಿ ಹನುಮಂತನಿಗೆ ಆತಿಥ್ಯ ನೀಡಲು ಮೈನಾಕ (ಅಭಿಮಾನಿ ದೇವತೆ) ಮೇಲೆದ್ದು ಬಂದನು. ಮೈನಾಕನನ್ನು ಆಲಂಗಿಸಿ, ಮುಂದೆ ದೇವತೆಗಳು ವರವಿತ್ತು ಕಳುಹಿದ ನಾಗಮಾತೆಯಾದ ಕದ್ರುವನ್ನು (ಸುರಸೆ) ಕಂಡ. ಹನುಮಂತನನ್ನು ತಿನ್ನಲು ಬಂದಾಗ ಹನುಮಂತನು ಅವಳ ಬಾಯಿಗಿಂತ ಹಿರಿದಾದ ಗಾತ್ರ ತೋರಿದ. ಅವಳು ತನ್ನ ಬಾಯನ್ನು ಮತ್ತಷ್ಟು ವಿಸ್ತರಿಸಿದಳು. ಕೊನೆಗೆ ಅಣುರೂಪದಿಂದ ಅವಳ ಬಾಯಲ್ಲಿ ಪ್ರವೇಶಿಸಿ ಕೂಡಲೆ ಹೊರಬಂದ.

ನಂತರ ಆಕಾಶಮಾರ್ಗದಲ್ಲಿ ಹಾರುತ್ತ ನೆರಳಿನಿಂದ ವ್ಯಕ್ತಿಯನ್ನು ಸೆಳೆದು ತಿನ್ನುವ ಸಿಂಹಿಕೆಯನ್ನು ಕಂಡು, ಅವಳು ಹನುಮಂತನನ್ನು ಸೆಳೆಯಲು ಪ್ರಯತ್ನಿಸಿದಾಗ, ಅವಳ ಶರೀರದ ಒಳಹೊಕ್ಕು

ಅವಳನ್ನು ಸೀಳಿ ಸಂಹರಿಸಿ ಹೊರಬಂದ ಹನುಮಂತ. ನಂತರ ಲಂಕೆಯ ಸುತ್ತಲೂ ಪ್ರಾಕಾರದಂತಿದ್ದ "ಲಂಬ" (ತ್ರಿಕೂಟ) ಪರ್ವತದ ಮೇಲೆ ಧುಮುಕಿದ. ಬಳಿಕ ತನ್ನ ರೂಪವನ್ನು ಚಿಕ್ಕದಾಗಿಸಿಕೊಂಡು ತನ್ನ ಅಣಿಮಾ ಶಕ್ತಿಯಿಂದ ಬೆಕ್ಕಿನಂತೆ ಚಿಕ್ಕದಾದ ಶರೀರವನ್ನು ಹೊಂದಿದನು. ಅಲ್ಲಿ ಲಂಕಿಣಿ ತಡೆಯಲು ತನ್ನ ಮುಷ್ಟಿಪ್ರಹಾರದಿಂದ ಅವಳನ್ನು ನಿರ್ವಿಣ್ಣಳಾಗಿಸಿ, ಅವಳಿಂದ ಅನುಮೋದಿತನಾಗಿ ಲಂಕಾಪ್ರವೇಷ ರಾತ್ರಿಕಾಲದಲ್ಲೇ ಮಾಡಿದನು. (ಹನುಮಂತನು ಲಂಕೆಯನ್ನು ರಾತ್ರಿಕಾಲದಲ್ಲೇ ಪ್ರವೇಶಿಸಿದ್ದು ಅವನ ಧೈರ್ಯದ ಸಂಕೇತ. ಏಕೆಂದರೆ ಅದು ನಿಶಾಚರರ ಪಟ್ಟಣ. ರಾಕ್ಷಸರು ಎದ್ದಿರುವುದು ರಾತ್ರಿಕಾಲದಲ್ಲೇ).

ಅಶೋಕವನದಲ್ಲಿ ಶಿಂಶುಪಾವೃಕ್ಷದ ಬುಡದಲ್ಲಿ ಕುಳ್ಳಿತಿದ್ದ ಸೀತಾಕೃತಿಯನ್ನು ಕಂಡ. ರಾಮನು ನೀಡಿದ್ದ ಉಂಗುರವನ್ನು ಸೀತಾದೇವಿಗೆ ನೀಡಿದ. ಅನಂತರ ಸೀತಾದೇವಿಯು ಶ್ರೀರಾಮನಿಗೆ ನೀಡಲೆಂದು ದಿವ್ಯವಾದ ಚೂಡಾಮಣಿಯನ್ನು ನೀಡಿದಳು ರಕ್ಕಸರನ್ನು ಸಂಹರಿಸಬಯಸಿದ ಹನುಮಂತನು ಸೀತಾಮಾತೆ ಕುಳಿತ ಶಿಂಶುಪಾವೃಕ್ಷವೊಂದನ್ನು ತೊರೆದು, ರಾವಣನಿಗೆ ಅತಿಪ್ರಿಯವಾದ ಅಶೋಕವನ್ನು ಧ್ವಂಸ ಮಾಡಿದನು. ಗಟ್ಟಿಯಾಗಿ ಘರ್ಜಿಸುತ್ತಾ ಕೋಟೆಯ ಬಾಗಿಲನ್ನೇರಿ ನಿಂದನು. ರಾವಣ ಕುಪಿತನಾಗಿ ಆ ಕಪಿಯನ್ನು ಹಿಡಿದು ತನ್ನಿ ಎಂದು ತನ್ನ ಕಿಂಕರರನ್ನು ಕಳುಹಿಸಿದನು. ಎಂಭತ್ತು ಕೋಟಿ ಸೇನಾಧಿಪತಿಗಳು, ಎಂಭತ್ತು ಸಾವಿರ ಭಟಾಗ್ರೇಸರರು ನಾನಾ ವಿಧವಾದ ಆಯುಧ ಸಮೂಹಗಳಿಂದ ಮುತ್ತಲು ಅವರನ್ನೆಲ್ಲ ತನ್ನ ಅಂಗೈ ಹೊಡೆತದಿಂದಲೇ ಪುಡಿಪುಡಿಮಾಡಿ ಸಂಹಾರ ಮಾಡಿದ ಹನುಮಂತ. ನಂತರ ಬಂದ ಬ್ರಹ್ಮರುದ್ರಾದಿ ವರಗಳಿಂದ ರಕ್ಷಿತರಾಗಿದ್ದ ಏಳು ಜನ ಮಂತ್ರಿಪುತ್ರರನ್ನು ಹನುಮಂತನು ಮರ್ದಿಸಿದ. ರಾವಣನ ಮಗನಾದ ರಾವಣನಷ್ಟೇ ಸಾಮರ್ಥ್ಯವುಳ್ಳ ಅಕ್ಷಕುಮಾರನನ್ನು ಸಂಹರಿಸಿದ ಹನುಮಂತನು ರಾವಣನನ್ನೂ ಸಂಹರಿಸಲು ಶಕ್ತನೆಂದು ನಿರೂಪಿಸಿದನು. (ಈ ಅಕ್ಷಕುಮಾರನ ಸಂಹಾರದಿಂದ ರಾವಣನ ಸೈನ್ಯದ ಮೂರನೇ ಒಂದು ಭಾಗವನ್ನು ನಾಶ ಮಾಡಿದ ಹನುಮಂತ).

ನಂತರ ಬಂದ ಇಂದ್ರಜಿತುವು ಹನುಮಂತನ ಮೇಲೆ ಬಾಣ ಪ್ರಯೋಗಿಸಲು ಅವನನ್ನು ಅಲುಗಿಸಲೂ ಇಂದ್ರಜಿತನಿಂದ ಅಸಾಧ್ಯವಾಯಿತು. ಆಗ ಇಂದ್ರಜಿತ್ ಬ್ರಹ್ಮಾಸ್ತ್ರ ಪ್ರಯೋಗಿಸಿದ. ಆಗ ಹನುಮಂತದೇವರು ಈರೀತಿ ಯೋಚಿಸಿದರು. "ನನ್ನಿಂದ ಈಗಾಗಲೇ ಹಲವಾರು ಬ್ರಹ್ಮದೇವರ ವರಗಳು ಭಂಗಗೊಂಡಿವೆ. ಈಗಲಾದರೂ ನಾನು ಅವರನ್ನು ಗೌರವಿಸುವೆ. ನಾನು

ಈಗ ಬಂಧನವಾಗುವುದರಿಂದ ರಾವಣಾದಿಗಳನ್ನು ಕಾಣಬಹುದು, ರಾಮನ ಸಂದೇಶವನ್ನು ತಲುಪಿಸಬಹುದು" ಎಂದು ಯೋಚಿಸಿ ಸಿಕ್ಕಂತೆ ವರ್ತಿಸಿದ. ಆಗ ರಾಕ್ಷಸರು ಇತರ ಪಾಶಗಳಿಂದ ಅವನನ್ನು ಬಿಗಿದರು. ಆಗ ರಾವಣನು ಹನುಮಂತನನ್ನು ಪ್ರಶ್ನಿಸುತ್ತಾನೆ " ನೀನು ಎಲ್ಲಿಂದ ಬಂದವನು? ಯಾರ ದೂತನು? ಏತಕ್ಕಾಗಿ ಅಶೋಕವನವನ್ನೆಲ್ಲಾ ಧ್ವಂಸ ಮಾಡಿದೆ" ಎನ್ನಲು, ಅಲ್ಲಿಂದಲೇ ಶ್ರೀರಾಮನಿಗೆ ವಂದಿಸಿ, ಹೇಳುತ್ತಾನೆ "ನಾನು ವಾಯುಪುತ್ರ. ರಘುಶ್ರೇಷ್ಟನೂ, ಎಣೆಯಿರದ ಪರಾಕ್ರಮಶಾಲಿಯೂ ಆದ ಶ್ರೀರಾಮನ ದೂತ, ನಿನ್ನ ಕುಲವನ್ನೇ ನಾಶಪಡಿಸಬಲ್ಲ ಸಮರ್ಥ. ನೀನು ಕೂಡಲೇ ಸೀತಾಮಾತೆಯನ್ನು ಒಪ್ಪಿಸದೇ ಹೋದಲ್ಲಿ ನಿನ್ನ ಪುತ್ರ, ಮಿತ್ರ, ಬಾಂಧವರೊಂದಿಗೆ ಬೇಗನೇ ನಾಶಹೊಂದುವೆ" ಎಂದನು.

ಇದರಿಂದ ಕೋಪಗೊಂಡ ರಾವಣನು ಹನುಮಂತನನ್ನು ಕೊಲ್ಲಲು ಆಜ್ಞೆಯಿತ್ತಾಗ, ವಿಭೀಷಣನು ತಡೆದ. ಆಗ ರಾಕ್ಷಸರನ್ನು ಹನುಮಂತನ ಬಾಲವನ್ನು ಸುಡುವ ಕಾರ್ಯದಲ್ಲಿ ರಾವಣ ತೊಡಗಿಸಿದ. ಹನುಮಂತನ ಬಾಲವನ್ನು ವಸ್ತ್ರಗಳ ರಾಶಿಯಿಂದ ಸುತ್ತಿಸುತ್ತಿ ಬೆಂಕಿ ಹಚ್ಚಿದರು. ಆದರೆ ವಾಯುಸಖನಾದ ಅಗ್ನಿ ಹನುಮಂತನ ಬಾಲವನ್ನು ಸುಡಲಿಲ್ಲ. ಆ ಬಾಲದಬೆಂಕಿಯಿಂದಲೇ ಹನುಮಂತನು ವಿಶ್ವಕರ್ಮನಿಂದ ನಿರ್ಮಾಣವಾಗಿದ್ದ ಇಡೀ ಲಂಕೆಗೇ ಬೆಂಕಿಯಿಟ್ಟನು.

ಕೈಲಾಸವನ್ನು ಎತ್ತಿದವ ರಾವಣ, ಇಂದ್ರನನ್ನು ಜಯಿಸಿದವ ಇಂದ್ರಜಿತ್. ಈ ಇಬ್ಬರನ್ನೂ ಸೋಲಿಸಿದ ಹನುಮಂತ ಇಂದ್ರ-ಶಿವರಿಗಿಂತ ಮಿಗಿಲೆಂದು ತೋರಿಸಿದ. ನಂತರ ಕಿಷ್ಕಿಂದೆ ತಲುಪಿ ಮಧುವನದಲ್ಲಿದ್ದ ಶ್ರೀರಾಮನಿಗೆ ಸಾಷ್ಟಾಂಗ ನಮಸ್ಕರಿಸಿ, ಸೀತಾಕೃತಿಯಿತ್ತ ಚೂಡಾಮಣಿಯನ್ನು ಅವನ ಚರಣಗಳಿಗೆ ಸಮರ್ಪಿಸಿದನು. ಆಗ ಶ್ರೀರಾಮಚಂದ್ರನಾದರೋ ಸಂಪೂರ್ಣವಾಗಿ ತೃಪ್ತಿಯನ್ನು ಹೊಂದಿದವನಾಗಿ ಅತ್ಯಂತ ಭಕ್ತಿಭರಿತನಾದ ಆ ವಾಯುಪುತ್ರನಾದ ಹನುಮಂತನಿಗೆ ಕೊಡಲು ಬೇರಾವುದೂ ಯೋಗ್ಯವಲ್ಲ ಎಂಬುದನ್ನು ಗಮನಿಸಿ ಅತ್ಯಂತ ಅಧಿಕವಾದ ಸ್ವಾತ್ಮಪ್ರದಾನವನ್ನು ಮಾಡುತ್ತ ಅವನನ್ನು ಗಾಡವಾಗಿ ಆಲಂಗಿಸಿಕೊಂಡ.